## ಪರಿವಿಡಿ


| | ಕಂಡಿಕೆ | ಪುಟ |
|---|---|---|
| **ಪೀಠಿಕೆ** | | v |
| **ಸಾಮಾನ್ಯ ಅವಲೋಕನ** | | vii-xi |
| **ಅಧ್ಯಾಯ – I : ಸಾಮಾನ್ಯ** | | |
| ರಾಜಸ್ವ ಸ್ವೀಕೃತಿಗಳ ಪ್ರವೃತ್ತಿ | 1.1 | 1-2 |
| ರಾಜಸ್ವ/ವರಮಾನ ಬಾಕಿಗಳ ವಿಶ್ಲೇಷಣೆ | 1.2 | 2-3 |
| ಇಲಾಖೆಯು ಪತ್ತೆ ಹಚ್ಚಿರುವ ತೆರಿಗೆ ವಂಚನೆಯ ಪ್ರಕರಣಗಳು | 1.3 | 3-4 |
| ಬಾಕಿಯಿರುವ ಮರುಪಾವತಿ ಪ್ರಕರಣಗಳು | 1.4 | 4 |
| ಲೆಕ್ಕಪರಿಶೋಧನೆಯ ಕಡೆಗೆ ಸರ್ಕಾರ/ಇಲಾಖೆಗಳ ಪ್ರತಿಕ್ರಿಯೆ | 1.5 | 4-7 |
| ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳ ಬಗ್ಗೆ ವ್ಯವಹರಿಸುವುದಕ್ಕಾಗಿನ ವ್ಯವಸ್ಥೆಯ ವಿಶ್ಲೇಷಣೆ | 1.6 | 7-9 |
| ಲೆಕ್ಕಪರಿಶೋಧನೆಯ ಪೂರ್ವಭಾವಿ ಯೋಜನೆ | 1.7 | 9-10 |
| ಲೆಕ್ಕಪರಿಶೋಧನೆಯ ಫಲಿತಾಂಶಗಳು | 1.8 | 10 |
| ಈ ವರದಿಯ ವ್ಯಾಪ್ತಿ | 1.9 | 10 |
| **ಅಧ್ಯಾಯ - II : ಮಾರಾಟಗಳು, ವ್ಯಾಪಾರ, ಇತ್ಯಾದಿಗಳ ಮೇಲಿನ ತೆರಿಗೆಗಳು/ಮೌಲ್ಯ ವರ್ಧಿತ ತೆರಿಗೆ** | | |
| ತೆರಿಗೆ ನಿರ್ವಹಣೆ | 2.1 | 11 |
| ಆಂತರಿಕ ಲೆಕ್ಕಪರಿಶೋಧನೆ | 2.2 | 11 |
| ಲೆಕ್ಕಪರಿಶೋಧನೆಯ ಫಲಿತಾಂಶಗಳು | 2.3 | 11-12 |
| ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಅಪ್ರಧಾನ ತೆರಿಗೆಗಳ ನಿರ್ವಹಣೆಯ ಮೇಲೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ | 2.4 | 13-34 |
| ಸಲ್ಲಿಕೆಗಳಲ್ಲಿ ಘೋಷಿಸಿಕೊಳ್ಳಲಾಗಿದ್ದಂತಹ ತೆರಿಗೆ ಬಾಧ್ಯತೆಯನ್ನು ಪಾವತಿಸದಿದ್ದುದು | 2.5 | 35 |
| ಕರ್ನಾಟಕ ಮೌವತೆ ಅಧಿನಿಯಮದ ಪರಿಚ್ಛೇದ 72(1)ರ ಅಡಿಯಲ್ಲಿ ದಂಡವನ್ನು ವಿಧಿಸದಿದ್ದುದು | 2.6 | 35-37 |
| ಲೆಕ್ಕಪರಿಶೋಧನೆಗೆ ಒಳಪಟ್ಟಂತಹ ಲೆಕ್ಕಪತ್ರಗಳ ತ:ಖ್ತೆಗಳಲ್ಲಿ ಘೋಷಿಸಿಕೊಳ್ಳಲಾಗಿದ್ದ ವ್ಯತ್ಯಾಸದ ತೆರಿಗೆ ಬಾಧ್ಯತೆಯನ್ನು ಪಾವತಿಸದಿದ್ದುದು/ಕಡಿಮೆ ಪ್ರಮಣದಲ್ಲಿ ಪಾವತಿಸಿದ್ದುದು | 2.7 | 37-38 |
| ಬಡ್ಡಿಯನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 2.8 | 38-39 |
| ತೆರಿಗೆ ಜಮೆ ಮೊತ್ತದಿಂದ ಅಧಿಕ ಪ್ರಮಾಣದ ಹೊಂದಾಣಿಕೆ | 2.9 | 39-40 |

| | ಕಂಡಿಕೆ | ಪುಟ |
|---|---|---|
| **ಅಧ್ಯಾಯ - III : ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕಗಳು** | | |
| ತೆರಿಗೆ ನಿರ್ವಹಣೆ | 3.1 | 41 |
| ಆಂತರಿಕ ಲೆಕ್ಕಪರಿಶೋಧನೆ | 3.2 | 41 |
| ಲೆಕ್ಕಪರಿಶೋಧನೆಯ ಫಲಿತಾಂಶಗಳು | 3.3 | 41 |
| **ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕಗಳ ನಷ್ಟವನ್ನು ತಡೆಯುವುದಕ್ಕಾಗಿ ನಿಯಂತ್ರಣಗಳ ಸಮರ್ಪಕತೆ' ಈ ವಿಷಯದ ಮೇಲೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ** | 3.4 | 42-69 |
| ಅವಮೂಲ್ಯಾಂಕನದ ಕಾರಣ ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 3.5 | 70 |
| ಮುದ್ರಾಂಕ ಸುಂಕ ಮತ್ತು ದಂಡವನ್ನು ವಿಧಿಸದಿದ್ದುದು | 3.6 | 70-72 |
| **ಅಧ್ಯಾಯ - IV : ಮೋಟಾರು ವಾಹನಗಳ ಮೇಲಿನ ತೆರಿಗೆಗಳು** | | |
| ತೆರಿಗೆ ನಿರ್ವಹಣೆ | 4.1 | 73 |
| ಆಂತರಿಕ ಲೆಕ್ಕಪರಿಶೋಧನೆ | 4.2 | 73 |
| ಲೆಕ್ಕಪರಿಶೋಧನೆಯ ಫಲಿತಾಂಶಗಳು | 4.3 | 73-74 |
| **ಮೋಟಾರು ವಾಹನಗಳ ಇಲಾಖೆಯಲ್ಲಿ ಇಲಾಖಾ ಶಾಸನಬದ್ಧ ಕ್ರಮಗಳ ಕಾರ್ಯವೈಖರಿ** | 4.4 | 75-86 |
| **ಅಧ್ಯಾಯ -V : ಭೂ ಕಂದಾಯ** | | |
| ತೆರಿಗೆ ನಿರ್ವಹಣೆ | 5.1 | 87 |
| ಆಂತರಿಕ ಲೆಕ್ಕಪರಿಶೋಧನೆ | 5.2 | 87 |
| ಲೆಕ್ಕಪರಿಶೋಧನೆಯ ಫಲಿತಾಂಶಗಳು | 5.3 | 87 |
| ಸವಾಲು ಮೊತ್ತವನ್ನು ನಿಯಮಬಾಹಿರವಾಗಿ ಮರುಪಾವತಿಸಿದ್ದುದು | 5.4 | 88 |
| ಮಾರ್ಗಸೂಚಿ ಮೌಲ್ಯವನ್ನು ತಪ್ಪಾಗಿ ಅಳವಡಿಸಿಕೊಂಡ ಕಾರಣ ಹಂಚಿಕೆ ಮಾಡಲಾದ ಭೂಮಿಯ ಮೌಲ್ಯವನ್ನು ಕಡಿಮೆ ಪ್ರಮಾಣದಲ್ಲಿ ವಸೂಲಾತಿ ಮಾಡಿದ್ದುದು | 5.5 | 89-90 |
| ಗುತ್ತಿಗೆ ಬಾಡಿಗೆ ಹಾಗೂ ಬಡ್ಡಿಯನ್ನು ಕಡಿಮೆ ಪ್ರಮಾಣದಲ್ಲಿ ನಿರ್ಧಾರಣೆ ಮಾಡಿದ್ದುದು ಹಾಗೂ ಅವುಗಳ ಪಾವತಿಗಾಗಿ ತಗಾದೆಯನ್ನು ಸೃಷ್ಟಿಸದಿದ್ದುದು | 5.6 | 90-91 |
| ರಿಯಾಯಿತಿ ದರಗಳಲ್ಲಿ ಹಂಚಿಕೆ ಮಾಡಲಾಗಿದ್ದ ಭೂಮಿಯ ಮೌಲ್ಯವನ್ನು ಕಡಿಮೆ ಪ್ರಮಾಣದಲ್ಲಿ ವಸೂಲಾತಿ ಮಾಡಿದ್ದುದು | 5.7 | 92 |
| **ಅಧ್ಯಾಯ -VI: ಖನಿಜ ಸ್ವೀಕೃತಿಗಳು** | | |
| ತೆರಿಗೆ ನಿರ್ವಹಣೆ | 6.1 | 93 |
| ಆಂತರಿಕ ಲೆಕ್ಕಪರಿಶೋಧನೆ | 6.2 | 93-94 |
| ಲೆಕ್ಕಪರಿಶೋಧನೆಯ ಫಲಿತಾಂಶಗಳು | 6.3 | 94 |

| | ಕಂಡಿಕೆ | ಪುಟ |
|---|---|---|
| ಖನಿಜ ರವಾನೆ ಪರ್ಮಿಟ್ಟುಗಳನ್ನು ಹೊಂದಿರದೆಯೇ ಖನಿಜಗಳನ್ನು ಸಾಗಾಣಿಕೆ ಮಾಡಿದ್ದಕ್ಕಾಗಿ ದಂಡವನ್ನು ವಿಧಿಸದಿದ್ದುದು | 6.4 | 94-95 |
| ಪರಿಷ್ಕರಣಾ–ಪೂರ್ವ ದರಗಳನ್ನು ಅನ್ವಯಿಸಿದ ಕಾರಣ ರಾಜಧನವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 6.5 | 95-96 |
| ರಾಜಧನದ ದರಗಳನ್ನು ತಪ್ಪಾಗಿ ಅಳವಡಿಸಿಕೊಂಡ ಕಾರಣ ರಾಜಧನವನ್ನು ಕಡಿಮೆ ಪ್ರಮಾಣದಲ್ಲಿ ಕಡಿದುಕೊಂಡಿದ್ದುದು | 6.6 | 96-97 |
| ಅನುಬಂಧ – ಎ | | 99 |
| ಅನುಬಂಧ – ಬಿ | | 100-101 |
| ಅನುಬಂಧ – ಸಿ | | 102-103 |

# ಪೀಠಿಕೆ

ರಾಜ್ಯ ಶಾಸಕಾಂಗದ ಮುಂದೆ ಮಂಡಿಸುವುದಕ್ಕಾಗಿ, ಮಾರ್ಚ್ 2016ಕ್ಕೆ ಅಂತ್ಯಗೊಂಡ ಸಾಲಿನ ಈ ವರದಿಯನ್ನು ಭಾರತದ, ಸಂವಿಧಾನದ ಕಲಮು 151ರ ಅಡಿಯಲ್ಲಿ ಕರ್ನಾಟಕದ ರಾಜ್ಯಪಾಲರಿಗೆ ಸಲ್ಲಿಸುವುದಕ್ಕಾಗಿ ತಯಾರಿಸಲಾಗಿದೆ.

ಈ ವರದಿಯು, ವಾಣಿಜ್ಯ ತೆರಿಗೆಗಳ ಇಲಾಖೆ, ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆ, ಕಂದಾಯ ಇಲಾಖೆ, ರಾಜ್ಯ ಅಬಕಾರಿ ಇಲಾಖೆ, ಸಾರಿಗೆ ಇಲಾಖೆ ಮತ್ತು ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಗಳು ಒಳಗೊಂಡಂತೆ ರಾಜಸ್ವ ವಲಯದ ಅಡಿಯಲ್ಲಿನ ಕರ್ನಾಟಕ ಸರ್ಕಾರದ ಇಲಾಖೆಗಳ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ ಮತ್ತು ಅನುಪಾಲನಾ ಲೆಕ್ಕಪರಿಶೋಧನೆಗಳ ಗಮನಾರ್ಹ ಫಲಿತಾಂಶಗಳನ್ನು ಒಳಗೊಂಡಿದೆ.

ಈ ವರದಿಯಲ್ಲಿ ತಿಳಿಸಲಾಗಿರುವಂತಹ ದೃಷ್ಟಾಂತಗಳು 2015–16ರ ಅವಧಿಗೆ ಮಾಡಲಾದಂತಹ ಪರೀಕ್ಷಾ–ಪರಿಶೀಲನೆಯ ಸಮಯದಲ್ಲಿ ಗಮನಿಸಲಾದವುಗಳಲ್ಲದೆಯೇ ಹಿಂದಿನ ಸಾಲುಗಳಲ್ಲಿ ಗಮನಿಸಲಾಗಿದ್ದು, ಆದರೆ ಹಿಂದಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ವರದಿ ಮಾಡಲು ಸಾಧ್ಯವಾಗದವುಗಳಾಗಿವೆ. 2015–16ರ ನಂತರದ ಅವಧಿಗೆ ಸಂಬಂಧಿತ ದೃಷ್ಟಾಂತಗಳನ್ನು ಅಗತ್ಯವಿರುವೆಡೆಯಲ್ಲಿ ಸೇರಿಸಲಾಗಿದೆ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಲೆಕ್ಕಪರಿಶೋಧನಾ ಮಾನದಂಡಗಳ ಅನುಸಾರ ಲೆಕ್ಕಪರಿಶೋಧನೆಯನ್ನು ನಡೆಸಲಾಗಿದೆ.

## ಸಾಮಾನ್ಯ ಅವಲೋಕನ

ಈ ವರದಿಯು, ತೆರಿಗೆ, ಬಡ್ಡಿ, ದಂಡ, ಬಿಟ್ಟುಕೊಡಲಾಗಿದ್ದಂತಹ ರಾಜಸ್ವ/ವರಮಾನ, ಇತ್ಯಾದಿಗಳಿಗೆ ಸಂಬಂಧಿಸಿದಂತೆ ₹ 1,017.45 ಕೋಟಿ ಮೊತ್ತವು ಒಳಗೊಂಡಂತೆ ಎರಡು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳು ಹಾಗೂ ಒಂದು ಅನುಪಾಲನಾ ಲೆಕ್ಕಪರಿಶೋಧನೆ ಸೇರಿದಂತೆ 17 ಕಂಡಿಕೆಗಳನ್ನು ಒಳಗೊಂಡಿದೆ. ಗಮನಿಸಲಾದಂತಹ ಕೆಲವು ಪ್ರಮುಖಾಂಶಗಳನ್ನು ಈ ಕೆಳಗೆ ತಿಳಿಸಲಾಗಿದೆ:

## I ಸಾಮಾನ್ಯ

2015–16 ಸಾಲಿಗೆ, ರಾಜ್ಯ ಸರ್ಕಾರದ ಒಟ್ಟಾರೆ ರಾಜಸ್ವ ಸ್ವೀಕೃತಿಗಳು ಹಿಂದಿನ ಸಾಲಿನ ₹ 1,04,142.15 ಕೋಟಿ ಮೊತ್ತಕ್ಕೆ ಪ್ರತಿಯಾಗಿ ₹ 1,18,817.31 ಕೋಟಿ ಆಗಿದ್ದಿತು. ಇದರ ಪೈಕಿ ಶೇಕಡಾ 68ರಷ್ಟನ್ನು ತೆರಿಗೆ ವರಮಾನದ (₹ 75,550.18 ಕೋಟಿ) ಮೂಲಕ ಹಾಗೂ ತೆರಿಗೆಯೇತರ ವರಮಾನದ (₹ 5.355.04 ಕೋಟಿ) ಮೂಲಕ ಸಂಗ್ರಹಿಸಲಾಗಿದ್ದಿತು. ಉಳಿಕೆ ಶೇಕಡಾ 32ರಷ್ಟನ್ನು ಭಾರತ ಸರ್ಕಾರದಿಂದ (ಕೇಂದ್ರ ಸರ್ಕಾರ) ವಿಭಜನೀಯ ಕೇಂದ್ರ ತೆರಿಗೆಗಳ ರಾಜ್ಯದ ಪಾಲಾಗಿ (₹ 23,983.34 ಕೋಟಿ) ಹಾಗೂ ಸಹಾಯಾನುಧಾನಗಳನ್ನಾಗಿ (₹ 13,928.75 ಕೋಟಿ) ಸ್ವೀಕರಿಸಲಾಗಿದ್ದಿತು.

**(ಕಂಡಿಕೆ 1.1)**

₹ 2,162.61 ಕೋಟಿ ಮೊತ್ತವು ಒಳಗೊಂಡಂತೆ ಹಾಗೂ 9,305 ಲೆಕ್ಕಪರಿಶೋಧನಾ ಅಂಶಗಳನ್ನು ಒಳಗೊಂಡಂತೆ ಡಿಸೆಂಬರ್ 2015ರ ವರೆಗೆ ನೀಡಲಾಗಿದ್ದಂತಹ ಒಟ್ಟಾರೆ 4,443 ಪರೀಕ್ಷಣಾ ವರದಿಗಳು ಜೂನ್ 2016ರ ಅಂತ್ಯದಲ್ಲಿದ್ದಂತೆ ಇತ್ಯರ್ಥಗೊಳ್ಳಲು ಬಾಕಿ ಇದ್ದವು.

**(ಕಂಡಿಕೆ 1.5)**

ಮೌಲ್ಯ ವರ್ಧಿತ ತೆರಿಗೆ, ರಾಜ್ಯ ಅಬಕಾರಿ, ಮೋಟಾರು ವಾಹನಗಳ ಮೇಲಿನ ತೆರಿಗೆ, ಸರಕುಗಳು ಮತ್ತು ಪ್ರಯಾಣಿಕರು, ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕ, ಭೂ ಕಂದಾಯ ಹಾಗೂ ಇತರೆ ಇಲಾಖಾ ಕಚೇರಿಗಳ 460 ಘಟಕ ದಾಖಲೆಗಳ 2015–16 ಸಾಲಿನಲ್ಲಿ ನಡೆಸಲಾದಂತಹ ಪರೀಕ್ಷಾ ಪರಿಶೀಲನೆಯು 1,385 ಕಂಡಿಕೆಗಳ ಮೂಲಕ ಸ್ಪಷ್ಟಪಡಿಸಲಾಗಿರುವಂತಹ ಪ್ರಕರಣಗಳಲ್ಲಿ ₹ 1,220.57 ಕೋಟಿ ಒಟ್ಟಾರೆ ರಾಜಸ್ವ/ವರಮಾನವನ್ನು ಕಡಿಮೆ ಪ್ರಮಾಣದಲ್ಲಿ ನಿರ್ಧಾರಣೆ ಮಾಡಿರುವುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿರುವುದು/ರಾಜಸ್ವ/ವರಮಾನದ ನಷ್ಟ, ಇವುಗಳನ್ನು ತೋರಿಸಿಕೊಟ್ಟಿತು.

**(ಕಂಡಿಕೆ 1.8)**

## II ಮಾರಾಟಗಳು, ವ್ಯಾಪಾರ, ಇತ್ಯಾದಿಗಳ ಮೇಲೆ ತೆರಿಗೆಗಳು/ಮೌಲ್ಯ ವರ್ಧಿತ ತೆರಿಗೆ

**"ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಅಪ್ರಧಾನ ತೆರಿಗೆಗಳ ನಿರ್ವಹಣೆಯು" ಈ ವಿಷಯದ ಮೇಲೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ**

ವೃತ್ತಿಗಳ ಮೇಲಿನ ತೆರಿಗೆ ಪಾವತಿಗೆ ಬಾಧ್ಯರಾಗಿದ್ದಂತಹ ರಾಜ್ಯದಲ್ಲಿನ 2.75 ಲಕ್ಷ ಸಾರಿಗೆ ವಾಹನಗಳ ಮಾಲೀಕರುಗಳು ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ನೋಂದಣಿ ಮಾಡಿಸಿಕೊಂಡಿರಲಿಲ್ಲ. ಅವರುಗಳಿಂದ ಏಪ್ರಿಲ್ 2011ರಿಂದ ಮಾರ್ಚ್ 2016ರ ನಡುವಿನ ಅವಧಿಗೆ ₹ 137.11 ಕೋಟಿ ಮೊತ್ತದಷ್ಟು ವೃತ್ತಿಗಳ ಮೇಲಿನ ತೆರಿಗೆ ಪಾವತಿಯು ಬಾಕಿಯಿದ್ದಿತು.

**(ಕಂಡಿಕೆ 2.4.9.1)**

ಸೇವಾ ವಲಯದಲ್ಲಿ ವಿವಿಧ ಹುದ್ದೆಗಳಲ್ಲಿ ತೊಡಗಿಸಿಕೊಂಡಿದ್ದಂತಹ 6,943 ಖಾಸಗಿ ಹಾಗೂ ಸಾರ್ವಜನಿಕ ನಿಯಮಿತ ಕಂಪನಿಗಳು, 12,316 ಪಾಲುದಾರಿಕೆ ಸಂಸ್ಥೆಗಳು ಹಾಗೂ 60,480 ವೈಯಕ್ತಿಕ ವ್ಯಕ್ತಿಗಳು ನೋಂದಣಿ ಮಾಡಿಸಿಕೊಳ್ಳದಿದ್ದುದು, ಈ ವ್ಯಕ್ತಿಗಳಿಂದ/ಸಂಸ್ಥೆಗಳಿಂದ 2011–12 ಹಾಗೂ 2015–16ರ ನಡುವಿನ ಅವಧಿಗೆ ₹ 99.67 ಕೋಟಿ ಮೊತ್ತದಷ್ಟು ವೃತ್ತಿಗಳ ಮೇಲಿನ ತೆರಿಗೆಯನ್ನು ವಸೂಲಾತಿ ಮಾಡದಿರುವಲ್ಲಿ ಪರಿಣಮಿಸಿದ್ದಿತು.

**(ಕಂಡಿಕೆ 2.4.9.2)**

2011–16ರ ಅವಧಿಯಲ್ಲಿ ತಯಾರಿಸಲಾಗಿದ್ದಂತಹ 667 ಚಲನಚಿತ್ರಗಳಲ್ಲಿ ಕೆಲಸ ಮಾಡುತ್ತಿದ್ದಂತಹ ಹಾಗೂ ತೆರಿಗೆಯನ್ನು ಪಾವತಿಸಲು ಬಾಧ್ಯರಾಗಿದ್ದಂತಹ ಅಂದಾಜು 1,600 ವ್ಯಕ್ತಿಗಳ ಪೈಕಿ ಕೇವಲ 76 ವ್ಯಕ್ತಿಗಳು ಮಾತ್ರ ನೋಂದಣಿ ಮಾಡಿಸಿಕೊಂಡಿದ್ದುದು, ಈ ವಲಯದಲ್ಲಿ ವೃತ್ತಿಗಳ ಮೇಲಿನ ತೆರಿಗೆ ಅಧಿನಿಯಮವನ್ನು ಜಾರಿಗೊಳಿಸುವಲ್ಲಿನ ಅಸಮರ್ಪಕತೆಯನ್ನು ತೋರಿಸುತ್ತದೆ.

**(ಕಂಡಿಕೆ 2.4.9.4)**

ದಾಖಲಿಸಿಕೊಂಡಿದ್ದಂತಹ 1.13 ಲಕ್ಷ ವ್ಯಕ್ತಿಗಳಿಗೆ ಸಂಬಂಧಿಸಿದಂತೆ PAN ಅನ್ನು ಸೆರಿಹಿಡಿಯುವಲ್ಲಿನ ವಿಫಲತೆಯು, ಓರ್ವ ವ್ಯಕ್ತಿಯು ವೃತ್ತಿ ತೆರಿಗೆಯ ಪಾವತಿಯ ಬಾಧ್ಯತೆಯು ಆದಾಯ ತೆರಿಗೆ ಪಾವತಿದಾರರೋ ಅಥವಾ ಅಲ್ಲವೋ ಎಂಬುದರ ಮೇಲೆ ಅವಲಂಬಿತವಾಗಿರುವ ಪ್ರಕರಣಗಳಲ್ಲಿ, ಬಾಕಿಯಿರುವಂತಹ ವೃತ್ತಿಗಳ ಮೇಲಿನ ತೆರಿಗೆಯ ಯಥಾರ್ಥತೆಯಿಂದ ಕೂಡಿದ ಮೊತ್ತವನ್ನು ಖಚಿತಪಡಿಸಿಕೊಳ್ಳುವಲ್ಲಿ ವಾಣಿಜ್ಯ ತೆರಿಗೆ ಇಲಾಖೆಗೆ ಸಾಧ್ಯವಾಗದಂತೆ ಮಾಡಿತು.

**(ಕಂಡಿಕೆ 2.4.10)**

ತಪ್ಪಾಗಿ ಮಾಡಲಾಗಿದ್ದ ವರ್ಗೀಕರಣ ಹಾಗೂ ತತ್ಪರಿಣಾಮವಾಗಿ ಕರದಾತರುಗಳು ತೆರಿಗೆ ದರಗಳನ್ನು ತಪ್ಪಾಗಿ ಅನ್ವಯಿಸಿದ್ದು ಹಾಗೂ ವೃತ್ತಿಗಳ ಮೇಲಿನ ತೆರಿಗೆ ಪಾವತಿಗೆ ಸಂಬಂಧಿಸಿದಂತೆ ತಪ್ಪುಗಳನ್ನು ಕಂಡು ಹಿಡಿಯುವಲ್ಲಿ PELSoftನಲ್ಲಿನ ಲೋಪದೋಷಗಳು 2.81 ಲಕ್ಷ ಮಾಲೀಕರುಗಳು, 47,940 ಪಾಲುದಾರ ಸಂಸ್ಥೆಗಳು ಹಾಗೂ 17,867 ಕಂಪನಿಗಳು 2011–12ರಿಂದ 2015–16 ಸಾಲುಗಳಲ್ಲಿ ₹ 82.57 ಕೋಟಿ ಮೊತ್ತದಷ್ಟು ವೃತ್ತಿಗಳ ಮೇಲಿನ ತೆರಿಗೆಯನ್ನು ಪಾವತಿಸದಿರುವಲ್ಲಿ/ಕಡಿಮೆ ಪ್ರಮಾಣದಲ್ಲಿ ಪಾವತಿಸುವಲ್ಲಿ ಪರಿಣಮಿಸಿದ್ದಿತು.

**(ಕಂಡಿಕೆಗಳು 2.4.12 ರಿಂದ 2.4.14)**

ಸೇವಾ ವಲಯದಲ್ಲಿನ ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದ 10,935 ವರ್ತಕರುಗಳು ₹ 4.59 ಕೋಟಿ ಮೊತ್ತದಷ್ಟು ವೃತ್ತಿಗಳ ಮೇಲಿನ ತೆರಿಗೆಯನ್ನು ಪಾವತಿಸಿರಲಿಲ್ಲ ಎಂಬುದನ್ನು ಸೇವಾ ತೆರಿಗೆ ಇಲಾಖೆಯ ಜೊತೆ ಲೆಕ್ಕಪರಿಶೋಧನೆಯು ಮಾಡಿದ ಅಡ್ಡಪರಿಶೀಲನೆಯು ತೋರಿಸಿಕೊಟ್ಟಿತು

**(ಕಂಡಿಕೆ 2.4.17)**

**ಅನುಪಾಲನಾ ಲೆಕ್ಕಪರಿಶೋಧನೆ**

413 ಕರದಾತರುಗಳು ಸಲ್ಲಿಸಿದ್ದಂತಹ 947 ಸಲ್ಲಿಕೆಗಳಲ್ಲಿ ಘೋಷಿಸಿಕೊಂಡಿದ್ದಂತಹ ₹ 5.51 ಕೋಟಿ ಮೊತ್ತದಷ್ಟು ತೆರಿಗೆಯನ್ನು ಪಾವತಿಸಿರಲಿಲ್ಲ.

**(ಕಂಡಿಕೆ 2.5)**

300 ಕರದಾತರುಗಳು ತೆರಿಗೆ ಮೊತ್ತವನ್ನು ವಿಳಂಬವಾಗಿ ಪಾವತಿಸಿದ್ದಕ್ಕಾಗಿ, ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪರಿಚ್ಛೇದ 72(1)ರ ಅಡಿಯಲ್ಲಿ ₹ 12.94 ಕೋಟಿ ಮೊತ್ತದಷ್ಟು ದಂಡವನ್ನು ವಿಧಿಸಿರಲಿಲ್ಲ.

**(ಕಂಡಿಕೆ 2.6)**

ಲೆಕ್ಕಪರಿಶೋಧನೆಗೆ ಒಳಪಟ್ಟಿದ್ದ ಲೆಕ್ಕಪತ್ರಗಳಲ್ಲಿ ಲೆಕ್ಕಪರಿಶೋಧಕರು ನಿರ್ಧಾರಣೆ ಮಾಡಿದ್ದಂತಹ ₹ 4.08 ಕೋಟಿ ಮೊತ್ತದಷ್ಟು ಹೆಚ್ಚುವರಿ ತೆರಿಗೆಯನ್ನು 34 ವರ್ತಕರುಗಳು ಪಾವತಿಸಿರಲಿಲ್ಲ.

**(ಕಂಡಿಕೆ 2.7)**

75 ವರ್ತಕರುಗಳು ತೆರಿಗೆ ಮೊತ್ತವನ್ನು ವಿಳಂಬವಾಗಿ ಪಾವತಿಸಿದ್ದಕ್ಕಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪರಿಚ್ಛೇದ 36(2)ರ ಅಡಿಯಲ್ಲಿ ₹ 2.62 ಕೋಟಿ ಮೊತ್ತದಷ್ಟು ಬಡ್ಡಿಯನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು,

**(ಕಂಡಿಕೆ 2.8)**

## III ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕಗಳು

**"ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕಗಳ ನಷ್ಟವನ್ನು ತಡೆಯುವುದಕ್ಕಾಗಿ ನಿಯಂತ್ರಣಗಳ ಸಮರ್ಪಕತೆ" ಈ ವಿಷಯದ ಮೇಲೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ**

ಜಿಲ್ಲಾ ನೋಂದಣಿ ಅಧಿಕಾರಿಗಳು ಇಳಿಮುಖಗೊಳಿಸಿದ್ದಂತಹ ಮಾರುಕಟ್ಟೆ ಮೌಲ್ಯವನ್ನು ಮುದ್ರಾಂಕ ಮತ್ತು ನೋಂದಣಿ ಇಲಾಖೆಯು ವಿಶ್ಲೇಷಿಸಿರಲಿಲ್ಲ ಹಾಗೂ ನೋಂದಣಿಯ ಇನ್ಸ್‌ಪೆಕ್ಟರ್ ಜನರಲ್‌ರವರು ಹಾಗೂ ಮುದ್ರಾಂಕಗಳ ಆಯುಕ್ತರವರಿಂದ ಸಮೀಕ್ಷೆಗಾಗಿ ಜಿಲ್ಲಾ ನೋಂದಣಿ ಅಧಿಕಾರಿಗಳ ಆದೇಶಗಳನ್ನು ಆಯ್ಕೆ ಮಾಡಿಕೊಳ್ಳುವ ಸಲುವಾಗಿ ಯಾವುದೇ ಮಾನದಂಡವನ್ನೂ ನಿರ್ದಿಷ್ಟಪಡಿಸಿರಲಿಲ್ಲ.

**(ಕಂಡಿಕೆ 3.4.10)**

ತಂಡಗಳು/ವ್ಯಕ್ತಿಗಳು ವಾಸ್ತವಾಂಶಗಳನ್ನು ಬಚ್ಚಿಟ್ಟಿರುವುದನ್ನು ಪತ್ತೆಹಚ್ಚುವ ಸಲುವಾಗಿ ಮುದ್ರಾಂಕ ಮತ್ತು ನೋಂದಣಿಗಳ ಇಲಾಖೆಯು ಯಾವುದೇ ವ್ಯವಸ್ಥೆಯನ್ನೂ ಸ್ಥಾಪಿಸಿರಲಿಲ್ಲ, ಇದು ಮುದ್ರಾಂಕ ಸುಂಕದ ನಷ್ಟ ಸಂಭವಿಸುವಲ್ಲಿಗೆ ದಾರಿ ಮಾಡಿಕೊಟ್ಟಿದ್ದಿತು. ಪರೀಕ್ಷಾ–ಪರಿಶೀಲನೆ ಮಾಡಲಾದಂತಹ ಪ್ರಕರಣಗಳಲ್ಲಿ ವಾಸ್ತವಾಂಶಗಳನ್ನು ಹಾಗೂ ಅಂಕಿಸಂಖ್ಯೆಗಳನ್ನು ಬಚ್ಚಿಟ್ಟಿದ್ದರ ಕಾರಣ ₹ 24.34 ಕೋಟಿ ಮೊತ್ತದಷ್ಟು ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಲಾಗಿದ್ದಿತು.

**(ಕಂಡಿಕೆ 3.4.13)**

ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆಯು, ಕಡ್ಡಾಯವಾಗಿ ನೋಂದಣಿ ಮಾಡಿಸಬೇಕಿಲ್ಲದಂತಹ ಸಾಧನಗಳಿಂದ ರಾಜಸ್ವ/ವರಮಾನಕ್ಕೆ ಸಂಬಂಧಿಸಿದಂತೆ ಪ್ರತಿಯೊಂದು ವಿಧಿಸುವಿಕೆಗೆ ಸಂಬಂಧಿತ ಕಲಮಿಗೆ (ಆರ್ಟಿಕಲ್‌ಗೆ) ಸಂಬಂಧಿಸಿದಂತೆ ರಾಜಸ್ವ/ವರಮಾನದ ವಿಭಜನೆಯನ್ನು ಹೊಂದಿರಲಿಲ್ಲ ಹಾಗೂ ಇಂತಹ ಸಾಧನಗಳ ಅಡಿಯಲ್ಲಿ ಯಾರಿಂದ ಮುದ್ರಾಂಕ ಸುಂಕ ಪಾವತಿಸಲಾಗಿದೆ ಎಂಬುದರ ಮಾಹಿತಿ ಹೊಂದಿರಲಿಲ್ಲ, ಅದರ ಕೊರತೆಯು ಅಂತಹ ಸಾಧನಗಳ ಮೇಲಿನ ಮುದ್ರಾಂಕ ಸುಂಕದ ತಕ್ಕ ವಸೂಲಾತಿಯನ್ನು ಖಚಿತಪಡಿಸಿಕೊಳ್ಳಲು ಜಾರಿ ಚಟುವಟಿಕೆಗಳ ಮೇಲೆ ಪ್ರಭಾವ ಬೀರುತ್ತದೆ.

**(ಕಂಡಿಕೆ 3.4.14.1)**

ಮುದ್ರಾಂಕ ಮತ್ತು ನೋಂದಣಿ ಇಲಾಖೆಯು, 2011–16ರ ಅವಧಿಯಲ್ಲಿ ಕೈಗಾರಿಕಾ ಯಂತ್ರದ ವರ್ಗಾವಣೆ/ಮಾರಾಟಗಳು ಹಾಗೂ ಕಬ್ಬಿಣದ ಅದಿರಿನ ಹರಾಜಿಗೆ ಸಂಬಂಧಿತ ಪ್ರಮಾಣಪತ್ರ, ಇವುಗಳ ಮೇಲೆ ಬಾಕಿಯಿದ್ದಂತಹ ₹ 313.26 ಕೋಟಿ ಮೊತ್ತದಷ್ಟು ಬಾಕಿಯಿದ್ದಂತಹ ಮುದ್ರಾಂಕ ಸುಂಕವನ್ನು ವಸೂಲಾತಿ ಮಾಡಿರಲಿಲ್ಲ.

**(ಕಂಡಿಕೆಗಳು 3.4.14.3 ಮತ್ತು 3.4.14.4)**

ಮುದ್ರಾಂಕ ಮತ್ತು ನೋಂದಣಿ ಇಲಾಖೆಯು, 2011–16ರಲ್ಲಿ ಕರ್ನಾಟಕದಲ್ಲಿನ ಕಂಪನಿಗಳು ನೀಡಲ್ಪಟ್ಟಿದ್ದ ಷೇರುಗಳು ಮತ್ತು ಬಾಂಡುಗಳ ಪ್ರಮಾಣಪತ್ರಗಳ ಮೇಲೆ ₹ 71.69 ಕೋಟಿ ಮೊತ್ತದಷ್ಟು ಮುದ್ರಾಂಕ ಸುಂಕ ಪಾವತಿಯ ವಿವರಗಳನ್ನು/ದೃಢೀಕರಣಗಳನ್ನು ಹೊಂದಿರಲಿಲ್ಲ.

**(ಕಂಡಿಕೆಗಳು 3.4.14.5 ಮತ್ತು 3.4.14.6)**

**ಅನುಪಾಲನಾ ಲೆಕ್ಕಪರಿಶೋಧನೆ**

ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಯ ದರಗಳನ್ನು ತಪ್ಪಾಗಿ ಅಳವಡಿಸಿಕೊಂಡ ಕಾರಣ, ಐದು ಮಾರಾಟ ಪತ್ರಗಳಿಗೆ ಸಂಬಂಧಿಸಿದಂತೆ ಆಸ್ತಿಗಳನ್ನು ಅವಮೂಲ್ಯಾಂಕನಗೊಳಿಸಲಾಗಿದ್ದಿತು, ಇದರಿಂದಾಗಿ, ಅನುಕ್ರಮವಾಗಿ ₹ 2.55 ಕೋಟಿ ಹಾಗೂ ₹ 0.45 ಕೋಟಿ ಮೊತ್ತದಷ್ಟು ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕ ಕಡಿಮೆ ಪ್ರಮಾಣದಲ್ಲಿ ವಿಧಿಸುವಲ್ಲಿ ಪರಿಣಮಿಸಿದ್ದಿತು.

**(ಕಂಡಿಕೆ 3.5)**

## IV ಮೋಟಾರು ವಾಹನಗಳ ಮೇಲಿನ ತೆರಿಗೆಗಳು

**"ಮೋಟಾರು ವಾಹನಗಳ ಇಲಾಖೆಯಲ್ಲಿ ಇಲಾಖಾ ಶಾಸನಬದ್ಧ ಕ್ರಮಗಳ ಕಾರ್ಯವೈಖರಿ"**

ದಾಖಲೆಗಳನ್ನು ಸಲ್ಲಿಸದಿದ್ದುದಕ್ಕಾಗಿ ಆರೋಪಗಳನ್ನು ದಾಖಲಿಸಲಾಗಿದ್ದಂತಹ 2,737 ಪ್ರಕರಣಗಳಲ್ಲಿ, 35 ಮೋಟಾರು ವಾಹನಗಳಿಂದ ಬಾಕಿಯಿದ್ದಂತಹ ತೆರಿಗೆ ₹ 1.20 ಕೋಟಿ ಮೊತ್ತವನ್ನು ಗುರುತಿಸಿರಲಿಲ್ಲ ಹಾಗೂ ಪಾವತಿಸುವಂತೆ ತಗಾದೆಯನ್ನು ಸೃಷ್ಟಿಸಿರಲಿಲ್ಲ. 154 ಪ್ರಕರಣಗಳಲ್ಲಿ, ಸುಸ್ಥಿತಿ ಪ್ರಮಾಣಪತ್ರಗಳು, ಅನುಮತಿ ಪ್ರಮಾಣಪತ್ರಗಳು ಹಾಗೂ ಯಾವುದೇ ಆಕ್ಷೇಪಣೆ ಇಲ್ಲದ ಪ್ರಮಾಣಪತ್ರಗಳನ್ನು ದಾಖಲಿಸಲಾಗಿದ್ದಂತಹ ಆರೋಪಗಳ ದಾಖಲೆಗಳನ್ನು ವಿಲೇವಾರಿ ಮಾಡದೆಯೇ ನೀಡಲಾಗಿದ್ದಿತು/ನವೀಕರಿಸಲಾಗಿದ್ದಿತು.

**(ಕಂಡಿಕೆಗಳು 4.4.6.2 ಮತ್ತು 4.4.6.3)**

13 ಪ್ರಕರಣಗಳಿಗೆ ಸಂಬಂಧಿಸಿದಂತೆ, ನೋಂದಣಿ ಪ್ರಮಾಣಪತ್ರ, ಮೋಟಾರು ವಾಹನ ಚಾಲನಾ ಪರವಾನಿಗೆ, ಪರವಾನಗಿ, ಇತ್ಯಾದಿಗಳಿಗೆ ಸಂಬಂಧಿಸಿದಂತೆ ಮತ್ತೋರ್ವ ಪ್ರಾದೇಶಿಕ ಸಾರಿಗೆ ಅಧಿಕಾರಿಯವರು ಮೂಲ ದಾಖಲೆಗಳನ್ನು ಮುಟ್ಟುಗೋಲು ಹಾಕಿಕೊಂಡಿರುವ ಮಾಹಿತಿಯನ್ನು ಖಚಿತಪಡಿಸಿಕೊಳ್ಳದೆಯೇ ಮೂಲಪ್ರತಿಯ ನಕಲು ಪ್ರತಿಯಗಳನ್ನು ನೋಂದಣೆ ಅಧಿಕಾರಿಗಳು ನೀಡಿದ್ದರು.

**(ಕಂಡಿಕೆ 4.4.6.2)**

ವಾಹನಗಳಲ್ಲಿ ಮಿತಿಮೀರಿದ ಹೊರೆಯನ್ನು ಹಾಕಿದ್ದ ಕಾರಣ 438 ಪ್ರಕರಣಗಳಲ್ಲಿ ದಾಖಲಿಸಲಾಗಿದ್ದ ಆರೋಪಗಳಿಗೆ ಸಂಬಂಧಿಸಿದಂತೆ, ಮಿತಿಮೀರಿದ ಹೊರೆಯನ್ನು ವಾಹನಗಳಿಂದ ಹೊರಕ್ಕೆ ಇಳಿಸಿರಲಿಲ್ಲ ಹಾಗೂ ₹ 68.19 ಲಕ್ಷ ಮೊತ್ತದಷ್ಟು ಸಂಯೋಜನಾ ದಂಡವನ್ನೂ ವಸೂಲಾತಿ ಮಾಡಿರಲಿಲ್ಲ.

**(ಕಂಡಿಕೆಗಳು 4.4.7.1 ಮತ್ತು 4.4.7.2)**

ಕ್ಷೇತ್ರ ಕಚೇರಿಗಳು ಹಾಗೂ ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರದ ನಡುವೆ ಸಮನ್ವಯತೆಯ ಕೊರತೆಯು, ಪರವಾನಿಗೆಗಳನ್ನು ಅಮಾನತ್ತಿನಲ್ಲಿಡಲಾಗಿದ್ದಂತಹ 143 ವಾಹನಗಳಿಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆಗಳೂ ಇರದ ಪ್ರಮಾಣಪತ್ರಗಳನ್ನು ನೀಡುವಲ್ಲಿ ಹಾಗೂ ದಾಖಲೆಗಳನ್ನು ವಶಕ್ಕೆ ತೆಗೆದುಕೊಳ್ಳದೇ ಇರುವುದಲ್ಲಿ ಪರಿಣಮಿಸಿದ್ದಿತು.

**(ಕಂಡಿಕೆ 4.4.8)**

₹ 63.08 ಲಕ್ಷ ಮೊತ್ತದಷ್ಟು ತೆರಿಗೆಯನ್ನು ಪಾವತಿಸದಿದ್ದುದಕ್ಕಾಗಿ ವಶಪಡಿಸಿಕೊಳ್ಳಲಾಗಿದ್ದ 130 ವಾಹನಗಳನ್ನು ಸಾರ್ವಜನಿಕ ಹರಾಜಿನ ಮೂಲಕ ವಿಲೇವಾರಿ ಮಾಡದಿದ್ದುದು, ಈ ವಾಹನಗಳಿಂದ ಬಾಕಿಯಿದ್ದಂತಹ ತೆರಿಗೆಯನ್ನು ವಸೂಲಾತಿ ಮಾಡದಿರುವಲ್ಲಿ ಪರಿಣಮಿಸಿದ್ದಿತು.

**(ಕಂಡಿಕೆ 4.4.9.1)**

## V ಭೂ ಕಂದಾಯ

ಸರ್ಕಾರಿ ಭೂಮಿ/ಜಮೀನನ್ನು ಹರಾಜು ಹಾಕುವ ವೇಳೆಯಲ್ಲಿ ಇಲಾಖೆಯು ಸಂಗ್ರಹಿಸಿದ್ದಂತಹ ಸವಾಲಿನ ಮೊತ್ತವನ್ನು ನಿಯಮಬಾಹಿರವಾಗಿ ಮರುಪಾವತಿಸಿದ್ದು ₹ 9.13 ಕೋಟಿ ಮೊತ್ತದಷ್ಟು ರಾಜಸ್ವ/ವರಮಾನದ ನಷ್ಟ ಸಂಭವಿಸುವಲ್ಲಿ ಪರಿಣಮಿಸಿದ್ದಿತು.

**(ಕಂಡಿಕೆ 5.4)**

ಕೃಷಿಯೇತರ ಉದ್ದೇಶಗಳಿಗಾಗಿ ಗುತ್ತಿಗೆಗೆ ನೀಡಲಾಗಿದ್ದಂತಹ ಭೂಮಿ/ಜಮೀನಿಗೆ ಗುತ್ತಿಗೆ ಬಾಡಿಗೆಯನ್ನು ನಿಗದಿಗೊಳಿಸುವ ವೇಳೆಯಲ್ಲಿ ಕೃಷಿ ಭೂಮಿ/ಜಮೀನಿಗೆ ಅನ್ವಯಗೊಳ್ಳುವ ಮಾರ್ಗಸೂಚಿ ಮಾರುಕಟ್ಟೆ ಮೌಲ್ಯವನ್ನು ಅಳವಡಿಸಿಕೊಂಡಿದ್ದು ₹ 29.72 ಕೋಟಿ ಮೊತ್ತದಷ್ಟು ಗುತ್ತಿಗೆ ಬಾಡಿಗೆಯನ್ನು ಕಡಿಮೆ ಪ್ರಮಾಣದಲ್ಲಿ ನಿರ್ಧಾರಣೆ ಮಾಡುವಲ್ಲಿ ಪರಿಣಮಿಸಿದ್ದಿತು.

**(ಕಂಡಿಕೆ 5.6)**

## VI ಗಣಿಗಳು ಮತ್ತು ಭೂವಿಜ್ಞಾನ

ಖನಿಜ ರವಾನೆ ಪರ್ಮಿಟ್ಟುಗಳನ್ನು ಪಡೆದುಕೊಳ್ಳದೆಯೇ ಅಪ್ರಧಾನ ಖನಿಜಗಳ ಸಾಗಾಣಿಕೆ ಮಾಡಿದ್ದಕ್ಕಾಗಿ ಕಲ್ಲುಗಣಿಗಾರಿಕೆ ಗುತ್ತಿಗೆದಾರರುಗಳಿಂದ ₹ 244.58 ಕೋಟಿ ಮೊತ್ತದಷ್ಟು ದಂಡವನ್ನು ವಿಧಿಸಿರಲಿಲ್ಲ.

**(ಕಂಡಿಕೆ 6.4)**

ಮೇಲ್ವಿಚಾರಣಾ ಸಮಿತಿಯು ರಾಜಧನದ ಪರಿಷ್ಕೃತ–ಪೂರ್ವ ದರಗಳನ್ನು ಅನ್ವಯಿಸಿದ್ದರಿಂದ, ಅದು ಕಬ್ಬಿಣದ ಅದಿರು ಹಾಗೂ ಮ್ಯಾಂಗನೀಸ್ ಅದಿರಿನ ಮೇಲೆ ₹ 18.78 ಕೋಟಿ ಮೊತ್ತದಷ್ಟು ರಾಜಧನವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸುವಲ್ಲಿ ಪರಿಣಮಿಸಿದ್ದಿತು.

**(ಕಂಡಿಕೆ 6.5)**